**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿತ್ತಾಪೂರ</u>**

**<u>ಸಿ.ಸಿ.ನಂ.1057/2025</u>**

**<u>ಫಿರ್ಯಾದಿಃ-</u>** ಕರ್ನಾಟಕ ಸರ್ಕಾರದ ಪರವಾಗಿಃ ಕಾಳಗಿ ಪೊಲೀಸ್ ಠಾಣೆ.

**-:: ವಿರುದ್ಧ ::-**

**<u>ಆರೋಪಿ:-</u>** 1. ಶೇರ ಅಲಿ @ ಮಹ್ಮದ ಅಲಿ,
ತಂದೆ ಮಹ್ಮದ ರಶಿದ,
ವಃ 31 ವರ್ಷ, ಉಃ ಕೂಲಿ,
ಸಾಃ ಕಾಳಗಿ, ತಾಃ ಕಾಳಗಿ.

2. ಕೈಲಾಸ ತಂದೆ ನಾಗಪ್ಪ ಮಳಗಿ,
ವಃ 28 ವರ್ಷ, ಉಃ ಕೂಲಿ,
ಸಾಃ ಗಾರಂಪಳ್ಳಿ,
ತಾಃ ಚಿತ್ತಾಪೂರ.

********

**-:: ದೋಷಾರೋಪಣೆ::-**

ನಾನು ಶ್ರೀ ಅಭಿಷೇಕ್ ರಾಮಚಂದ್ರ ಜೋಶಿ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಚಿತ್ತಾಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

ಕಾಳಗಿ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕಂದಗೂಳ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ದಿಃ 20.01.2025 ರಂದು ರಾತ್ರಿ 02.00 ಎ.ಎಂ. ಸುಮಾರಿಗೆ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಕಪೌಂಡ ಗೇಟ ಬೀಗ ಮುರಿದು ದೇವಸ್ಥಾನದ ಆವರಣದಲ್ಲಿ ಅತಿಕ್ರಮಣ ಪ್ರವೇಶ ಮಾಡಿದ್ದು, ಆ ಮೂಲಕ ನೀನು ಬಿ.ಎನ್.ಎಸ್.ಕಲಂಃ 331 (4) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಿದ ದಿನಾಂಕದಂದು, ಸಮಯದಂದು ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಶ್ರೀ ವೀರಭದ್ರೇಶ್ವರ ದೇವಸ್ಥಾನದ ಕಪೌಂಡ ಗೇಟ ಬೀಗ ಮುರಿದು ದೇವಸ್ಥಾನದ ಆವರಣದಲ್ಲಿ ಒಳಗೆ ಪ್ರವೇಶಿಸಿ ಕಬ್ಬಿಣದ ಹುಂಡಿಯನ್ನು ಕಳ್ಳತನ ಮಾಡಿಕೊಂಡು, ನಂಬರ ಪ್ಲೇಟ್ ಇಲ್ಲದ ಇಂಜಿನ್ ಮತ್ತು ಚೆಸ್ಸಿ ನಂಬರ ತಪ್ಪಾಗಿರುವ ಮೋಟಾರ ಸೈಕಲ ಮೇಲೆ ತೆಗೆದುಕೊಂಡು ಊರ ಹೋರಗಡೆ ಸ್ವಲ್ಪ ದೂರಲ್ಲಿ ಇಂಜಿನ್ ಮತ್ತು ಚೆಸ್ಸಿ ನಂಬರ ತಪ್ಪಾಗಿರುವ ಮೋಟಾರ ಸೈಕಲ ಮೇಲೆ ತೆಗೆದುಕೊಂಡು, ಊರ ಹೊರಗಡೆ ಸ್ವಲ್ಪ ದೂರದಲ್ಲಿರುವ ನಾಲಾದಲ್ಲಿ ಹೋಗಿ ಕಬ್ಬಿಣದ ಹುಂಡಿಯನ್ನು ಎಕ್ಸೆಲ್ ಬ್ಲೇಡ ದಿಂದ ಕಟ್ ಮಾಡಿ ಅದರಲ್ಲಿದ್ದ ರೂ.40,300/- ಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು, ಆ ಮೂಲಕ ಆರೋಪಿಯಾದ ನೀನು ಬಿ.ಎನ್.ಎಸ್.ಕಲಂಃ305 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

**<u>ವೌ.ಪ್ರ.ಸಂ.ಪ್ರ.240(2) ರಡಿಯಲ್ಲಿ ಆರೋಪಿತರ ಹೇಳಿಕೆ</u>**

ಪ್ರಶ್ನೆಃ1ಃ ಈಗ ಓದಿ ಹೇಳಿದ ಆರೋಪಣೆ ಅರ್ಥವಾಗಿದೆಯೇ?

ಉಃ ಆಃ1 ಆಃ2

ಪ್ರಶ್ನೆಃ2ಃ ಹಾಗಿದ್ದಲ್ಲಿ ನಿಮ್ಮ ಸಮಜಾಯಿಷಿಕೆ ಏನು? ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕು?

ಉಃ ಆಃ1 ಆಃ2

ದಿನಾಂಕಃ 24.01.2026 ರಂದು ಅಪರಾದಿಗೆ/ಗಳಿಗೆ ತಿಳಿದಿರುವ ಭಾಷೆಯಾದ ಕನ್ನಡದಲ್ಲಿ ನನ್ನ ಸಮಕ್ಷಮ ಓದಿ ಹೇಳಿ ಅಭಿಲೇಖಿಸಿರುವ ಈ ಹೇಳಿಕೆ ಅವರ/ನ ಸರಿಯಾದ ಒಕ್ಕಣೆ ಎಂದು ದೃಢೀಕರಿಸುತ್ತೇನೆ.

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ. ಚಿತ್ತಾಪೂರ.**